OS No. 37/2023
PW-01

<u>ದಿನಾಂಕ: 16-07-2026.</u>

**<u>ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುರೆದ ಪಾಟಿ ಸವಾಲು ಪ್ರತಿವಾದಿ 1 ರಿಂದ 4 ಹಾಗೂ 6 ರಿಂದ 8 ನೇ ಪ್ರತಿವಾದಿಗಳ ಶ್ರೀ ASD ಮಾನ್ಯ ವಕೀಲರಿಂದ:</u>**

8. ಸಾಕ್ಷಿಗೆ ಈಗ ನೀವು ಮಾರಾಟ ಮಾಡಿರುವ ಜಮೀನಿನ ಸ್ವಾಧೀನಾನುಭವದಲ್ಲಿ ಸದರಿ ಖರೀದಿದಾರರು ಇರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ತಮ್ಮ ದೊಡ್ಡಪ್ಪ 1 ನೇ ಪ್ರತಿವಾದಿ ಮಾರಾಟ ಮಾಡಿರುವುದಾಗಿ ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ಖರೀದಿದಾರರನ್ನು ಪ್ರಸ್ತುತ ಪ್ರಕರಣದಲ್ಲಿ ಯಾವ ಕಾರಣಕ್ಕಾಗಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದು ಕೇಳಿದ್ದಕ್ಕೆ ಸಾಕ್ಷಿ ತಮಗೆ ಸದರಿ ಮಾರಾಟದ ಬಗ್ಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ವಿಭಾಗದಲ್ಲಿ ಮೂರು ಹೊಲಗಳು ಹಾಗೂ ಒಂದು ಮನೆ ಬಂದಿದ್ದು ಅದನ್ನ ನಾವು ಬೇರೆಯವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸ್ವತ್ತುಗಳಲ್ಲಿ ಪಾಲು ಆಗಿರುವುದಿಲ್ಲ ಎಂದು ಹೇಳಿ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇವೆ. 1 ನೇ ಪ್ರತಿವಾದಿಯ ಮಕ್ಕಳು ವಿಭಾಗವಾಗಿರುತ್ತಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಯು ಬಳ್ಳಾರಿಯ ಜಿಂದಾಲ್ ಪ್ಯಾಕ್ಟರಿಯಲ್ಲಿ ಕೆಲಸವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಕಳೆದ 4-5 ವರ್ಷಗಳ ಹಿಂದೆ ಸದರಿ ದಾವಾ ಮಾರಾಟದ ಬಗ್ಗೆ ತಿಳಿದಿದ್ದರೂ ಕೂಡಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಗಳು ತಮ್ಮ ಸ್ವತ್ತುಗಳ ಮೇಲೆ ಬ್ಯಾಂಕುಗಳಲ್ಲಿ ಸಾಲವನ್ನು ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಹಾಗೂ ನನ್ನ ಅಕ್ಕನ ಮದುವೆಗಳನ್ನು 1 ನೇ ಪ್ರತಿವಾದಿ ಮಾಡಿರುತ್ತಾರೆ. ಸದರಿ ವಿಭಾಗದಲ್ಲಿ ನನ್ನ ತಂದೆಗೆ ಸ.ನಂ.121/2, 107/2 ಹಾಗೂ 131/1 ರಲ್ಲಿ ವಿಭಾಗ ಬಂದಿರುತ್ತದೆ ಎಂದರೆ ಸರಿಯಲ್ಲ. ನಾನು, ನನ್ನ ತಂದೆ ಹಾಗೂ ನನ್ನ ಅಕ್ಕ

ಮಹಾದೇವಮ್ಮ ಸದರಿ ಮೂರು ಸರ್ವೆ ನಂಬರಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವುಗಳು ವಿಭಾಗವಾದ ನಂತರ ಸದರಿ ಜಮೀನುಗಳನ್ನು ಮಾರಾಟ ಮಾಡಿದ್ದರೂ ಕೂಡಾ ಅವುಗಳನ್ನು 1 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ 1 ರಿಂದ 3 ನೇ ಪ್ರತಿವಾದಿಗಳು ಬೇರೆ ಬೇರೆ ಮನೆಗಳಲ್ಲಿ ವಾಸ ಮಾಡುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ ಹಾಗೂ ಮುಂದುವರೆದು ಮನೆಯಲ್ಲಿ ವಿಭಾಗ ಆಗಿರುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಹಾಗೂ 1 ರಿಂದ 3 ನೇ ಪ್ರತಿವಾದಿಗಳ ಆಧಾರ ಕಾರ್ಡ ಹಾಗೂ ರೇಶನ ಕಾರ್ಡುಗಳು ಬೆರೆ ಬೇರೆಯಾಗಿರುತ್ತವೆ ಎಂದರೆ ಸರಿ. ನನ್ನ ತಾಯಿ ನನ್ನ ಅಕ್ಕ ಸೇರಿ ನನ್ನಿಂದ ವಿಭಾಗವಾಗಿರುವುದಿಲ್ಲ ಎಂದು ಹೇಳಿ ಸುಳ್ಳು ಹೇಳಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ಜೀವಂತ ಇದ್ದಾಗಲೇ ನಾವುಗಳು ವಿಭಾಗವಾಗಿದ್ದರೂ ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು.ಪ್ರ.ದ.ನ್ಯಾ.ದಂ. ಶಹಾಪೂರ.